ಕೆಜಿಎಫ್ ಅಂದರೆ 'ಕೋಲಾರ ಗೋಲ್ಡ್ ಫೀಲ್ಡ್'. ಕನ್ನಡದಲ್ಲಿ ಕೋಲಾರ ಚಿನ್ನದ ಗಣಿ ಪ್ರದೇಶ. ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವವರ ಪಾಲಿಗೆ ಅದು ಅಮೂಲ್ಯವಾದ ಚಿನ್ನ ಸಿಗುವ ಪ್ರದೇಶ. ದೇಶಕ್ಕೇ ಚಿನ್ನ ಕೊಟ್ಟ ಊರು. ವಿಶ್ವದ ಹಳೆಯ, ಅತ್ಯಂತ ಆಳದ ಚಿನ್ನದ ಗಣಿಗಳಲ್ಲಿ ಒಂದು.

ದೂರದ ಕರಾವಳಿ, ಮಲೆನಾಡು, ಉತ್ತರ ಕರ್ನಾಟಕ ಭಾಗಗಳಲ್ಲಿ ಚಿಕ್ಕ ಮಕ್ಕಳಿಗೆ ಕೆಜಿಎಫ್ ಬಗ್ಗೆ ದೊಡ್ಡವರು ಚೆಂದದ ಕಥೆಗಳನ್ನು ಹೇಳುವುದೂ ಉಂಟು. 'ಕೋಲಾರ ಅಂದರೆ ಚಿನ್ನ. ಅಲ್ಲಿ ನೆಲ ಅಗೆದರೆ ಚಿನ್ನದ ಅದಿರು ಸಿಗುತ್ತದೆ' ಎನ್ನುವುದಿದೆ. ವಿಜಯನಗರ ಸಾಮ್ರಾಜ್ಯದ ಕುರಿತು ಅಭಿಮಾನದಿಂದ ಹೇಳುವಂತೆ ಕೆಜಿಎಫ್ ಬಗ್ಗೆ ಕಥೆಗಳನ್ನು ಹೇಳುವುದಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯ ಬೀದಿಗಳಲ್ಲಿ ಮುತ್ತು, ರತ್ನ, ಚಿನ್ನವನ್ನು ಗುಡ್ಡೆ ಹಾಕಿಕೊಂಡು ಸೇರುಗಳಲ್ಲಿ ಅಳೆದು ಮಾರುತ್ತಿದ್ದರಂತೆ ಎಂದು ಹೇಳುವಾಗ ಇರುವ ಅಭಿಮಾನವೇ ಕೆಜಿಎಫ್ ಬಗ್ಗೆಯೂ ವ್ಯಕ್ತವಾಗುತ್ತದೆ. ಕೋಲಾರ ಎಂಬ ಜಿಲ್ಲಾಕೇಂದ್ರದ ಸಾಂಸ್ಕೃತಿಕ ಚಹರೆಯೇ ಬೇರೆ, ಕೆಜಿಎಫ್ ಎಂಬ ಗಣಿ ಪ್ರದೇಶದಲ್ಲಿ ಕಾಣುವ ಜೀವನಕ್ರಮವೇ ಬೇರೆ ಎನ್ನುವ ಅರಿವು ಎಲ್ಲರಲ್ಲೂ ಇದ್ದೇ ಇರುತ್ತದೆ ಎನ್ನಲಾಗದು.

ಕೆಜಿಎಫ್‌ನ ಮಹತ್ವ ಏನು ಎಂಬುದನ್ನು ಹಿಂದೊಮ್ಮೆ ಹೊರಗಿನ ಜನರು ಆಡುತ್ತಿದ್ದ ಮಾತುಗಳ ಮೂಲಕವೇ ಗುರುತಿಸಬಹುದು. 'ಕೆಜಿಎಫ್ ಬಳಿಯ ಬೆಂಗಳೂರು' ಎಂದು ಇಂದಿನ ಸಿಲಿಕಾನ್ ಸಿಟಿ ಬೆಂಗಳೂರನ್ನು ಗುರುತಿಸುತ್ತಿದ್ದರಂತೆ!

ಉದ್ಯೋಗ ನಗರಿಯಾಗಿ ಬೆಂಗಳೂರು ಬೆಳೆಯುವುದಕ್ಕಿಂತ, ಅಸ್ಮಿತೆ ಪಡೆದುಕೊಳ್ಳುವುದಕ್ಕಿಂತ ಮೊದಲೇ ಕೆಜಿಎಫ್ ಜಾಗತಿಕ ಮಟ್ಟದಲ್ಲಿ ಹೆಸರು ಸಂಪಾದಿಸಿತ್ತು. ಈ ಕೆಜಿಎಫ್ ಇಂದಿಗೆ ಒಂದು ಶತಮಾನ ಮೊದಲೇ ಯೋಜನಾಬದ್ಧವಾಗಿ ನಿರ್ಮಿಸಿದ ನಗರವೂ ಹೌದು. ಆದರೆ, ಕಾಲಚಕ್ರದ ಅಡಿಗೆ ಸಿಲುಕಿ ಕೆಜಿಎಫ್ ಇಂದು ಹೊಳಪು ಕಳೆದುಕೊಂಡಿದೆ. ಆಳದ ಗಣಿಗಳಿಂದ ಚಿನ್ನದ ಅದಿರನ್ನು ಎತ್ತಿ, ಸಂಸ್ಕರಿಸುತ್ತಿದ್ದ ಘಟಕಗಳು, ಬ್ರಿಟಿಷ್ ಮಾದರಿಯ ನೂರೆಂಟು ಬಂಗಲೆಗಳು–ಕಟ್ಟಡಗಳು ಇಂದು ಕೆಜಿಎಫ್‌ನ ಗತ ವೈಭವದ ಮೇಲೆ ಮುಸುಕು ಹೊದ್ದು ಮಲಗಿಬಿಟ್ಟಿವೆ. ಕೆಜಿಎಫ್ ಪ್ರದೇಶದಲ್ಲಿ ಬ್ರಿಟಿಷರು ಬಳಸುತ್ತಿದ್ದ ಗಾಲ್ಫ್ ಮೈದಾನ ಇದೆ. ಅಲ್ಲಿ ಈಗಲೂ ಗಾಲ್ಫ್ ಆಡಲಾಗುತ್ತದೆ. ಬೆಂಗಳೂರಿನ ಹಚ್ಚ ಹಸಿರಿನ ಗಾಲ್ಫ್ ಕ್ಲಬ್ ನೋಡಿ, ಕೆಜಿಎಫ್‌ನ ಒಣಗಿದ ಹುಲ್ಲಿನ ಗಾಲ್ಫ್ ಕ್ಲಬ್ ಕಂಡಾಗ 'ಗಾಲ್ಫ್ ಮೈದಾನ ಹೀಗಿರುತ್ತಾ' ಎಂಬ ಪ್ರಶ್ನೆ ಮೂಡದಿರದು. ಕೆಜಿಎಫ್ ಗಾಲ್ಫ್ ಕ್ಲಬ್‌ನ 'ಒಣ' ಹುಲ್ಲು ಈ ನಗರ ಕಂಡ ಸ್ಥಿತ್ಯಂತರಕ್ಕೆ ಈಗ ರೂಪಕದಂತೆ ಕಾಣುತ್ತಿದೆ.

ಹಿಂದೆ 'ಲಿಟ್ಲ್ ಇಂಗ್ಲೆಂಡ್' ಎಂದು ಕರೆಸಿಕೊಳ್ಳುತ್ತಿದ್ದ ಈ ಗಣಿ ನಗರ ಇಂದು ಹಾಳು ಹಂಪೆಯ ನೆನಪನ್ನು ತಂದುಕೊಟ್ಟರೆ ಅಚ್ಚರಿಯಿಲ್ಲ. ಗಣಿ ಚಟುವಟಿಕೆಗಳು ಸ್ಥಗಿತಗೊಂಡ ಹದಿನೇಳು ವರ್ಷಗಳ ಅವಧಿಯಲ್ಲಿ ಕೆಜಿಎಫ್ ಎಂಬ ನಗರವೇ ಇಂದು 'ಸಂತ್ರಸ್ತ'ವಾಗಿ ನಿಂತಿದೆ.

ಕೆಜಿಎಫ್‌ಗೆ ಸಂಬಂಧಿಸಿದ ಪ್ರಮುಖ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿದ್ದು ಜಿಮ್ಖಾನಾ ಮೈದಾನ (ಇಂದಿನ ಡಾ. ಅಂಬೇಡ್ಕರ್ ಸ್ಟೇಡಿಯಂ). ಅಲ್ಲಿ ಚಿನ್ನದ ಗಣಿಯ ಶತಮಾನೋತ್ಸವ ಸಮಾರಂಭ 1980ರ ಡಿಸೆಂಬರ್ 14, 15ರಂದು ನಡೆದಿತ್ತು. ಕಾರ್ಯಕ್ರಮಕ್ಕೆ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ರಾಜೀವ್ ಗಾಂಧಿ, ಸೋನಿಯಾ, ರಾಹುಲ್, ಪ್ರಿಯಾಂಕಾ ಜೊತೆ ಬಂದಿದ್ದರು. ನೆಲದಾಳದಲ್ಲಿ ಅಂದು ಲಭ್ಯವಿದ್ದ ಸೌಲಭ್ಯಗಳನ್ನು ಕಂಡು ಆಶ್ಚರ್ಯಚಕಿತರಾಗಿದ್ದರು. ಇಂದಿರಾ ತಮ್ಮ ತಂದೆ ಪಂಡಿತ್ ಜವಾಹರಲಾಲ್ ನೆಹರೂ ಜೊತೆ ಹಿಂದೆ ಅಲ್ಲಿಗೆ ಬಂದಿದ್ದ ನೆನಪುಗಳನ್ನು ಮೆಲುಕು ಹಾಕಿದ್ದರು. ಭಾರತದ ಅತ್ಯಂತ ಹಳೆಯ ಪಕ್ಷವಾದ ಕಾಂಗ್ರೆಸ್ಸನ್ನು ಈಗ ಮುನ್ನಡೆಸುತ್ತಿರುವವರು ನೆಹರೂ ಕುಟುಂಬದ ನಾಲ್ಕನೆಯ ತಲೆಮಾರಿನವರು (ರಾಹುಲ್ ಗಾಂಧಿ). ಚುನಾವಣೆಯಲ್ಲಿ ಹಿಂದಿ ಹೃದಯಭಾಗದ ಮೂರು ರಾಜ್ಯಗಳನ್ನು ಗೆದ್ದು ರಾಹುಲ್ ಖುಷಿಯಲ್ಲಿದ್ದಾರೆ. ಇತ್ತ ಕೆಜಿಎಫ್‌ನಲ್ಲಿ ಕೆಲಸ ಮಾಡಲು ತಮಿಳುನಾಡು ಸೇರಿದಂತೆ ಬೇರೆ ಕಡೆಗಳಿಂದ ವಲಸೆ ಬಂದಿದ್ದ ಕಾರ್ಮಿಕ ಕುಟುಂಬಗಳ ಪೈಕಿ ಈಗ ಉಳಿದಿರುವವರು ನಾಲ್ಕನೆಯ ತಲೆಮಾರಿನವರು. ರಾಜಕೀಯದ ನಾಲ್ಕನೆಯ ತಲೆಮಾರು ಸಂಭ್ರಮದಲ್ಲಿ ಇರುವಾಗ, ಚಿನ್ನದ ಗಣಿಯ ನಾಲ್ಕನೆಯ ತಲೆಮಾರು ತುತ್ತಿನ ಚೀಲ ತುಂಬಿಸಿಕೊಳ್ಳಲು ಬೆಂಗಳೂರಿನ ಕಡೆ ಮುಖ ಮಾಡಿದೆ.

